# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 86 (526)
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ : 05.02.2021

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಕನ್ನಡ</th><th>ಆಂಗ್ಲ</th></tr>
<tr><td>(ಅ)</td><td>ಜವಳಿ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಗಮಗಳು ಎಷ್ಟು;</td><td>ಕೈಮಗ್ಗ ಮತ್ತು ಜವಳಿ ಇಲಾಖೆಯಡಿಯಲ್ಲಿ ಎರಡು ನಿಗಮಗಳು ಕಾರ್ಯನಿರ್ವಹಿಸುತ್ತಿದ್ದು ವಿವರಗಳು ಇಂತಿವೆ.<br>1. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕೆ.ಹೆಚ್.ಡಿ.ಸಿ), ಹುಬ್ಬಳ್ಳಿ<br>2. ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ (ಕೆ.ಎಸ್.ಟಿ.ಐ.ಡಿ.ಸಿ.), ಬೆಳಗಾವಿ.</td><td>Two corporations are working under Department of Handloom and Textiles. Details as below:<br>1. Karnataka Handloom Development Corporation Ltd, (K.H.D.C), Hubballi.<br>2. Karnataka State Textiles Infrastructure Development Corporation Ltd, (K.S.T.I.D.C), Belagavi.</td></tr>
<tr><td>(ಆ)</td><td>ಸದರಿ ನಿಗಮಗಳಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ಯಾವ ರೀತಿಯಲ್ಲಿ ಅನುದಾನ ನೀಡಲಾಗುತ್ತಿದೆ; (ಅಂಕಿ ಅಂಶ ಒದಗಿಸುವುದು)</td><td>1. <u>ಕೆ.ಹೆಚ್.ಡಿ.ಸಿ:</u><br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ನೇಕಾರರಿಗೆ ಸರಬರಾಜು ಮಾಡುವ ಕಚ್ಚಾ ನೂಲು ಖರೀದಿಗಾಗಿ ಪ್ರೋತ್ಸಾಹಧನ, ನಿಗಮವು ಬ್ಯಾಂಕುಗಳಿಂದ ಪಡೆಯುವ ಸಾಲಕ್ಕೆ ಬಡ್ಡಿ ರಿಯಾಯಿತಿ ಹಾಗೂ ನೇಕಾರರಿಂದ ತಯಾರಾಗುವ ಬಟ್ಟೆ ಮಾರಾಟದ ಮೇಲೆ ಶೇ.20 ರಷ್ಟು ಸಹಾಯಧನವನ್ನು ಸರ್ಕಾರವು ಪ್ರತಿ ವರ್ಷ ನೇಕಾರರ ಪ್ಯಾಕೇಜ್ ಯೋಜನೆಯಡಿ ರಾಜ್ಯ ಸರ್ಕಾರ ಅನುದಾನವನ್ನು ಒದಗಿಸುತ್ತಿದ್ದು, ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸುತ್ತಿಲ್ಲ.<br>2020-21ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಈವರೆವಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.<br>(ರೂ.ಲಕ್ಷಗಳಲ್ಲಿ)<br><table><tr><th>ನೇಕಾರರ ಪ್ಯಾಕೇಜ್-ಕೆ.ಹೆಚ್.ಡಿ.ಸಿ.</th><th>ಹಂಚಿಕೆಯಾದ ಅನುದಾನ</th><th>ಮೊದಲ ಮೂರು ಕಂತುಗಳಲ್ಲಿ ಬಿಡುಗಡೆ ಯಾದ ಅನುದಾನ</th></tr><tr><td>ಸಹಾಯಧನ-<br>2851-00-103-0-69-106</td><td>1133.00</td><td>849.75</td></tr><tr><td></td><td></td><td></td></tr></table></td><td>1. <u>K.H.D.C</u>:<br>Under the Weavers Package, every year the State Government is providing incentive for purchase of yarn to be supplied to handloom weavers, interest subsidy on loans availed by KHDC from banks and rebate subsidy at 20% on sale of handloom products. Government of India is not providing any financial assistance.<br>Details of grant released by State Government for the year 2020-21 as on date is furnished below:<br><table><tr><th colspan="3">(Rs.Lakhs)</th></tr><tr><th>Head of Account–Weavers Package - KHDC</th><th>Grant allocated</th><th>Grant released in the first 3 installments</th></tr><tr><td>Subsidy<br>2851-00-103-0-69-106</td><td>1133.00</td><td>849.75</td></tr></table></td></tr>
</table>

| | | |
|---|---|---|
| ವಿಶೇಷ ಘಟಕ ಯೋಜನೆ<br>2851–00–103–0–69–422 | 260.00 | 195.00 |
| ಗಿರಿಜನ ಉಪ ಯೋಜನೆ<br>2851–00–103–0–69–423 | 107.00 | 80.25 |
| ಒಟ್ಟು ಮೊತ್ತ | **1500.00** | **1125.00** |

| | | |
|---|---|---|
| Special Component Plan<br>2851-00-103-0-69-422 | 260.00 | 195.00 |
| Tribal Sub Plan<br>2851-00-103-0-69-423 | 107.00 | 80.25 |
| Total | 1500.00 | 1125.00 |

| | | | |
|---|---|---|---|
| | | 2. **ಕೆ.ಎಸ್.ಟಿ.ಐ.ಡಿ.ಸಿ:**<br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಪ್ರತಿ ವರ್ಷ ನಿಯಮಿತವಾಗಿ ಯಾವುದೇ ಅನುದಾನವನ್ನು ಒದಗಿಸುತ್ತಿಲ್ಲ.<br>ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ನಿಗಮವು ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ ಸೀಮಿತವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುದಾನ ಒದಗಿಸುತ್ತಿವೆ.<br>ರಾಜ್ಯ ಸರ್ಕಾರದ ಯೋಜನೆಗಳಡಿ ನಿಗಮವು ಕೈಗೊಳ್ಳುವ ನಿಗದಿತ ಕಾರ್ಯಕ್ರಮಗಳಿಗೆ ರಾಜ್ಯ ಸರ್ಕಾರವು ಅನುದಾನ ಒದಗಿಸುತ್ತದೆ. ಸದರಿ ನಿಗಮಕ್ಕೆ ಆಡಳಿತಾತ್ಮಕ ವೆಚ್ಚಗಳಿಗಾಗಿ ವಾರ್ಷಿಕ ರೂ.100.00 ಲಕ್ಷಗಳನ್ನು ಎರಡು ವರ್ಷಗಳ ಹಿಂದೆ ಅಂದರೆ 2017–18ರಲ್ಲಿ ಮಾತ್ರ ಒದಗಿಸಲಾಗಿದೆ. | 2. **K.S.T.I.D.C**:<br>There is no regular allocation of funds for each year, by both Government of India (GOI) and Government of Karnataka (GOK).<br>GOI and GOK are releasing funds only based on programmes assigned to the Corporation.<br>During the Year 2017-18 K.S.T.I.D.C has been provided with Rs.100 Lakhs towards administrative expenses. |
| (ಇ) | ಕೈಮಗ್ಗ ಹಾಗೂ ವಿದ್ಯುತ್ ಮಗ್ಗದಿಂದ ನೇಯ್ದ ಬಟ್ಟೆಗಳನ್ನು ಯಾವ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ; | 1. **ಕೆ.ಹೆಚ್.ಡಿ.ಸಿ:**<br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಬರುವ ನೋಂದಾಯಿತ ನೇಕಾರರು, ಕೈಮಗ್ಗಗಳನ್ನು ಬಳಸಿ ನೇಯ್ಗೆ ಮಾಡುವ ಬಟ್ಟೆಗಳನ್ನು ವಿದ್ಯಾ ವಿಕಾಸ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಲು ಶಿಕ್ಷಣ ಇಲಾಖೆಗೆ ಪೂರೈಸಲಾಗುತ್ತಿದೆ. ಇದೇ ರೀತಿ ರೇಷ್ಮೆ ನೂಲು ಬಳಸಿ ನೇಯ್ಗೆ ಮಾಡುವ ಸೀರೆ ಹಾಗೂ ಇತರೆ ಬಟ್ಟೆಗಳನ್ನು ನಿಗಮದ ಪ್ರಿಯದರ್ಶಿನಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. | 1. **K.H.D.C**:<br>The fabrics woven by the registered handloom weavers of KHDC are being supplied to Education Department for distribution of uniforms under Vidya Vikasa Scheme. Other varieties such as sarees etc., are being sold through Priyadarshini Handloom Outlets of KHDC. |

| | | | |
|---|---|---|---|
| | | **2. <u>ಕೆ.ಎಸ್.ಟಿ.ಐ.ಡಿ.ಸಿ:</u>**<br><br>ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ವಿದ್ಯುತ್ ಮಗ್ಗಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ಬಹುತೇಕ ಮಗ್ಗಗಳಲ್ಲಿ ಪಾಲಿಯಸ್ಟರ್ ಸೀರೆಗಳನ್ನು ಉತ್ಪಾದನೆ ಮಾಡಲಾಗುತ್ತಿದ್ದು ಸ್ಥಳೀಯ ಮಾರುಕಟ್ಟೆಯಲ್ಲಿ ಅವುಗಳ ವಿಲೇವಾರಿ ಮಾಡಲಾಗುತ್ತಿದೆ.<br><br>ಶಿಕ್ಷಣ ಇಲಾಖೆಯ ಮೂಲಕ ವಿದ್ಯಾ ವಿಕಾಸ ಯೋಜನೆಯಡಿ ಸರ್ಕಾರಿ ಶಾಲಾ ಮಕ್ಕಳಿಗೆ ಪೂರೈಸಲಾಗುತ್ತಿರುವ ಸಮವಸ್ತ್ರ ಬಟ್ಟೆಯನ್ನು ನಿಗಮದ ವತಿಯಿಂದ ಕಳೆದ 20 ವರ್ಷಗಳಿಂದ ಸರಬರಾಜು ಮಾಡಲಾಗುತ್ತಿದೆ. | 2. **<u>K.S.T.I.D.C</u>**:<br><br>Only power looms are working under the perview of K.S.T.I.D.C and most of the powelooms are engaged in weaving of polyester sarees and these sarees are been directly sold in the local market..<br><br>K.S.T.I.D.C is also supplying school uniform cloth to Education Department under Vidya Vikas Scheme since past 20 years. |
| (ಈ) | ಉತ್ಪಾದನೆ ಹಾಗೂ ಬೇಡಿಕೆಗಳ ಅಂತರ ಯಾವ ರೀತಿಯಲ್ಲಿದೆ; | **1. <u>ಕೆ.ಹೆಚ್.ಡಿ.ಸಿ:</u>**<br>ಇತ್ತೀಚಿನ ದಿನಗಳಲ್ಲಿ ತಾಂತ್ರಿಕತೆಯ ಬಳಕೆಯಿಂದ ವಿಭಿನ್ನ ವಿನ್ಯಾಸಗಳನ್ನು ಹೊಂದಿರುವ ಸೀರೆ ಹಾಗೂ ಇತರೆ ಜವಳಿ ವಸ್ತ್ರಗಳು ಮಾರುಕಟ್ಟೆಯಲ್ಲಿ ಕಡಿಮೆ ದರದಲ್ಲಿ ಲಭ್ಯವಿರುವ ಕಾರಣ ಕೈಮಗ್ಗದ ಸೀರೆ ಹಾಗೂ ಜವಳಿ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗಿದೆ. ಅಲ್ಲದೆ ಕೈಮಗ್ಗ ಉತ್ಪನ್ನಗಳು ದುಬಾರಿಯಾಗಿರುವ ಕಾರಣ, ಜನ ಸಾಮಾನ್ಯರು ಕಡಿಮೆ ದರದಲ್ಲಿ ದೊರೆಯುವ ಪವರ್ ಮಿಲ್ ನಿಂದ ತಯಾರಾಗುವ ಉತ್ಪನ್ನಗಳನ್ನು ಖರೀದಿಸುತ್ತಿದ್ದಾರೆ. ಇದರಿಂದ ಕೈಮಗ್ಗದ ಸೀರೆಗಳು ಹಾಗೂ ಇತರೆ ವಸ್ತುಗಳ ಬೇಡಿಕೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ.<br><br>**2. <u>ಕೆ.ಎಸ್.ಟಿ.ಐ.ಡಿ.ಸಿ:</u>**<br>ಕೆ.ಎಸ್.ಟಿ.ಐ.ಡಿ.ಸಿ ನಿಗಮವು ಜವಳಿ ಕ್ಷೇತ್ರದ ಮೂಲಭೂತ ಸೌಲಭ್ಯ ಅಭಿವೃದ್ಧಿಯ ಉದ್ದೇಶ ಹೊಂದಿರುತ್ತದೆ. ಆದಾಗ್ಯೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಆದೇಶವನ್ನು ಪಡೆದು ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲಾಗಿದೆ. | **<u>1.</u> <u>K.H.D.C</u>**:<br><br>Presently due to advanced technology, sarees and other variety fabrics produced on mills/powerloom are available in the market with attractive designs and combinations with low price, the demand for handloom products are declining day by day. Apart from this, compared to the rates of products of mills/ power loom are very cheaper than handloom products, the customers are going for only mill sector products only.<br>**<u>2.</u> <u>K.S.T.I.D.C</u>**:<br><br>The main objective of K.S.T.I.D.C is to create infrastructure for development of Textile industry in the state. In-spite of this K.S.T.I.D.C has supplied school uniform cloth to the Education Department under Vidya Vikasa Scheme based on the supply order. |

| | | | |
|---|---|---|---|
| (ಉ) | ಇದರ ಪರಿಣಾಮವಾಗಿ ರಾಜ್ಯದ ನೇಕಾರರ ಸಮಸ್ಯೆಗೆ ಸರ್ಕಾರ ಯಾವ ರೀತಿಯಲ್ಲಿ ಪರಿಹಾರ ಒದಗಿಸುತ್ತದೆ; | **1. ಕೆ.ಹೆಚ್.ಡಿ.ಸಿ:**<br>ಮೇಲಿನ ಕಂಡಿಕೆ(ಆ)ರಲ್ಲಿ ತಿಳಿಸಿರುವಂತೆ ಸಹಾಯ ಧನವನ್ನು ನಿಗಮಕ್ಕೆ ಸರ್ಕಾರವು ಒದಗಿಸುತ್ತಿರುತ್ತದೆ. ಇದರಿಂದ ನೇಕಾರರಿಗೆ ಉದ್ಯೋಗ ನೀಡಲು ಸಹಕಾರಿಯಾಗುತ್ತದೆ.<br><br>**2. ಕೆ.ಎಸ್.ಟಿ.ಐ.ಡಿ.ಸಿ:**<br>ಕೆ.ಎಸ್.ಟಿ.ಐ.ಡಿ.ಸಿ ನಿಗಮವು ಜವಳಿ ಕ್ಷೇತ್ರದ ಮೂಲಭೂತ ಸೌಲಭ್ಯ ಅಭಿವೃದ್ಧಿಯ ಉದ್ದೇಶ ಹೊಂದಿರುತ್ತದೆ. ಆದಾಗ್ಯೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಆದೇಶವನ್ನು ಪಡೆದು ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲಾಗಿದೆ. | **1. K.H.D.C:**<br>As per information provided in the Question No.(ಆ), the Government is providing subsidy to KHDC every year, which enables KHDC to provide regular employment to weavers.<br><br>**2. K.S.T.I.D.C:**<br>The main objective of K.S.T.I.D.C is to create infrastructure for development of Textile industry in the state. In-spite of this K.S.T.I.D.C has supplied school uniform cloth to the Education Department under Vidya Vikasa Scheme based on the supply order. |
| (ಊ) | ಸದರಿ ನಿಗಮಗಳು ನೇಕಾರರಿಂದ ಪಡೆದ ಬಟ್ಟೆಗಳನ್ನು ಮ್ಲಾರಾಟ ಮಾಡಲು ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳಿಂದ ನೇರವಾಗಿ ಸಹಕಾರ ಪಡೆಯಲು ಸರ್ಕಾರ ಯಾವ ಕ್ರಮಗಳನ್ನು ಹಮ್ಮಿಕೊಂಡಿದೆ? | **1. ಕೆ.ಹೆಚ್.ಡಿ.ಸಿ:**<br>ಶಿಕ್ಷಣ ಇಲಾಖೆಯು ವಿದ್ಯಾ ವಿಕಾಸ ಯೋಜನೆ ಅಡಿ ಕಲಬುರ್ಗಿ ಮತ್ತು ಬೆಂಗಳೂರು ವಿಭಾಗಗಳ ಜಿಲ್ಲೆಗಳಿಗೆ ಪ್ರತಿ ವರ್ಷ ಸುಮಾರು 50.00 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಗಳನ್ನು ಸರಬರಾಜು ಮಾಡುವ ಸಂಬಂಧ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದೊಂದಿಗೆ 2018-19 ರಿಂದ 2020-21ರ ಮೂರು ಶೈಕ್ಷಣಿಕ ವರ್ಷಗಳ ಅವಧಿಗೆ ಒಡಂಬಡಿಕೆ (MOU) ಮಾಡಿಕೊಂಡಿತ್ತು. ಈ ಒಡಂಬಡಿಕೆ ಯನ್ವಯ ನಿಗಮವು 2018-19 ರಿಂದ 2020-21ರ ಶೈಕ್ಷಣಿಕ ವರ್ಷಗಳಿಗೆ ಸಮವಸ್ತ್ರಗಳನ್ನು ಸರಬರಾಜು ಮಾಡಿದ್ದು, ಸದರಿ ಒಡಂಬಡಿಕೆಯು 2020-21ನೇ ಸಾಲಿಗೆ ಸರಬರಾಜು ಮಾಡುವುದರೊಂದಿಗೆ ಮುಕ್ತಾಯವಾಗಲಿದ್ದು, ಒಡಂಬಡಿಕೆ ನವೀಕರಣಗೊಳಿಸಲು ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. | **1. K.H.D.C:**<br>Under Vidya Vikasa Scheme of Education Department, Karnataka Handloom Development Corporation is supplying about 50.00 lakh mtrs. of uniform cloth to Kalburgi & Bengaluru Divisions every year. Karnataka Handloom Development Corporation has signed an MoU with Education Department for supply of around 50 lakh mtrs. of uniform cloth under Vidya Vikasa Scheme for 3 academic years viz., from 2018-19 to 2020-21. As per this MoU, KHDC has supplied uniform cloth to Education Department during these years and as the supplies for 2020-21 is completed now, KHDC has submitted a proposal to Education Department for renewal of MoU for a further period of 3 academic years. |

| | | | |
|---|---|---|---|
| | | ಇದಲ್ಲದೇ ನಿಗಮವು ಸರ್ಕಾರದಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಇಲಾಖೆಗಳಿಗೆ ಬೇಕಾಗಿರುವ ಜವಳಿ ಸಾಮಗ್ರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ನಿಯಮ 4 (ಹೆಚ್) ರಡಿಯಲ್ಲಿ ಆದೇಶಗಳನ್ನು ಪಡೆದು ಸರಬರಾಜು ಮಾಡುತ್ತಿದೆ.<br><br>2. **<u>ಕೆ.ಎಸ್.ಟಿ.ಐ.ಡಿ.ಸಿ:</u>**<br><br>ಕೆ.ಎಸ್.ಟಿ.ಐ.ಡಿ.ಸಿ ನಿಗಮವು ಜವಳಿ ಕ್ಷೇತ್ರದ ಮೂಲಭೂತ ಸೌಲಭ್ಯ ಅಭಿವೃದ್ಧಿಯ ಉದ್ದೇಶ ಹೊಂದಿರುತ್ತದೆ. ಆದಾಗ್ಯೂ ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಆದೇಶವನ್ನು ಪಡೆದು ಸಮವಸ್ತ್ರ ಬಟ್ಟೆಯನ್ನು ಸರಬರಾಜು ಮಾಡಲಾಗಿದೆ. | Apart from this, KHDC is supplying cloth requirement of Government Departments such as Women & Child Welfare Department, Social Welfare Department etc., by procuring orders from these departments under Section 4(h) of KTPP Act.<br><br>**<u>2. K.S.T.I.D.C</u>**:<br><br>The main objective of K.S.T.I.D.C is to create infrastructure for development of Textile industry in the state. In-spite of this K.S.T.I.D.C. has supplied school uniform cloth to the Education Department under Vidya Vikasa Scheme based on the supply order. |

ಸಂ: CI 16 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.